# ಆಹಾ ಸುದ್ದಿ!

★ ಸಸಿತೋಟ



ಕ್ಯಾಲಿಫೋರ್ನಿಯಾದ ಜೆರೆಮೈ ತನ್ನ ಹಾರ್ಲೆ ಡೇವಿಡ್‌ಸನ್ ಬೈಕ್‌ನಲ್ಲಿ ಪ್ರೀತಿಯ ಸಾಕು ನಾಯಿಯನ್ನು ಕೂರಿಸಿಕೊಂಡು ಸುತ್ತಾಡುತ್ತಾನೆ. ಈ ಘನ ಕಾರ್ಯಕ್ಕಾಗಿ ಜೆರೆಮೈ 17- 18 ವರ್ಷಗಳ ಹಿಂದೆಯೇ ಕೋರ್ಟ್‌ನಲ್ಲಿ ಹೋರಾಡಿ ಅನುಮತಿ ಪಡೆದನಂತೆ. ಅನುಮತಿಗಾಗಿ ಸಾವಿರಾರು ಡಾಲರ್ ಖರ್ಚು ಮಾಡಿದನಂತೆ. ಬೆಂಗಳೂರಿನ ಬೀದಿಗಳಲ್ಲಾದರೆ ಚಿಕ್ಕಾಸಿನ ಖರ್ಚೂ ಇಲ್ಲದೇ ನಾಯಿ ಮಾತ್ರ ಏಕೆ, ಇಡೀ ಸಂಸಾರವನ್ನೇ ಬೈಕ್ ಮೇಲೆ ಹೊತ್ತು ಓಡಾಡಬಹುದಿತ್ತು.



ಮೆಕ್ಸಿಕೋದ ವಿಶಿಷ್ಟ ಬಗೆಯ ಸಸ್ಯದಿಂದ ತಯಾರಿಸುವ ಈ ಮದ್ಯದ ಒಂದು ಬಾಟಲ್ ಬೆಲೆ 74,000 ಡಾಲರ್. (ಸುಮಾರು 44,44,440 ರೂಪಾಯಿ). ಬೆಲೆ ಬಾಟಲ್ ಒಳಗಿರುವುದಕ್ಕಲ್ಲ, ಪ್ಲಾಟಿನಂ ಹಾಗೂ ಹರಳುಗಳಿಂದ ಮಾಡಿರುವ ಈ ಬಾಟಲ್‌ಗೆ. ಇದು ಮದ್ಯದ ಬಾಟಲ್ ಕಲೆಯಂತೆ. ಆದರೆ ಒಳಗಿರುವುದು ಖಾಲಿಯಾಗಿ, ಹೊಟ್ಟೆಯೊಳಗಿರುವುದು ಆಡಿಸಲು ಶುರು ಮಾಡಿದ ಮೇಲೆ ಬಾಟಲ್ ಅನ್ನು ಗೋಡೆಗೆ ಕುಟ್ಟಿ ಸಿನಿಮಾ ಡೈಲಾಗ್ ಹೇಳಲು ಹೋದಿರಾ, 74 ಸಾವಿರ ಡಾಲರ್ ಹುಡಿ ಅಷ್ಟೆ!

ಅಮರಾವತಿಯ ಆಶಿಕ್ ಗವೈ ಎಂಬ ಯುವಕ ದಂತ ಊದಿಕೊಂಡಿದೆ ಎಂದು ಆಸ್ಪತ್ರೆಗೆ ಹೋದ. ದಂತವನ್ನು ಕತ್ತರಿಸಲೇ ಕಷ್ಟಪಟ್ಟ ವೈದ್ಯರು ಉಳಿ ಹಾಗೂ ಸುತ್ತಿಗೆಯನ್ನು ಬಳಸಬೇಕಾಯ್ತಂತೆ. ಕತ್ತರಿಸಿದರೆ ಊದಿಕೊಂಡಿದ್ದ ದಂತದ ತುಂಬಾ ಹಲ್ಲುಗಳು. ಸಣ್ಣ ಮುತ್ತುಗಳಂತಿದ್ದ ಒಂದೊಂದೇ ಹಲ್ಲುಗಳನ್ನು ಕಿತ್ತ ವೈದ್ಯರು ಬರೋಬ್ಬರಿ 232 ಹಲ್ಲುಗಳನ್ನು ಎಣಿಸಿದರಂತೆ. ಆಶಿಕ್‌ಗೆ ಅಗಿಯಲು 28 ಹಲ್ಲುಗಳನ್ನು ಉಳಿಸಿದ್ದಾರಂತೆ. ಸಿಟ್ಟು ಬಂದಾಗ 32 ಹಲ್ಲುಗಳನ್ನು ಉದುರಿಸಿಬಿಡುತ್ತೇನೆ ಎನ್ನುವ ಬದಲು 232 ಹಲ್ಲುಗಳನ್ನು ಉದುರಿಸಿಬಿಡುತ್ತೇನೆ ಎಂಬುದು ಆಶಿಕ್‌ಗೆ ಮಾತ್ರ ಅನ್ವಯವಾಗುತ್ತಿತ್ತು, ಈಗ ವೈದ್ಯರು ಆ ಅವಕಾಶವನ್ನೂ ಕಿತ್ತುಕೊಂಡಿದ್ದಾರೆ.



ಮಕ್ಕಳ ಸುರಕ್ಷತೆಗೆ ಬ್ರಿಟನ್ನಿನ ಸೇಂಟ್ ಜಾನ್ಸ್ ಆ್ಯಂಬುಲೆನ್ಸ್ ಸೃಷ್ಟಿಸಿರುವ ವಿಶೇಷ ಉಡುಗೆಯಿದು. ಇದನ್ನು ತೊಟ್ಟ ಮಕ್ಕಳು ರಸ್ತೆ, ಮೈದಾನದ ಉಬ್ಬು-ತಗ್ಗುಗಳಲ್ಲಿ ಬಿದ್ದರೂ ಸಣ್ಣಪುಟ್ಟ ಜಜ್ಜು ಗಾಯವಾಗುವುದನ್ನು ತಡೆಯುವುದಂತೆ. ಗಗನ ಯಾತ್ರಿ ತೊಡುವ ಉಡುಗೆಯನ್ನು ಹೋಲುವ ಇದನ್ನು ತೊಟ್ಟ ಮಗು ಎಂತೆಂತಹ ತ್ಯಾಗ ಮಾಡಬೇಕೋ ಎಂಬ ಕೂಗು ಅಲ್ಲಿಯ ಪೋಷಕರಲ್ಲಿ ಏಳುತ್ತಿದೆಯಂತೆ.



ನ್ಯೂಜೆರ್ಸಿಯ ಡೇನಿಯಲ್ ಎಂಬಾಕೆ ಕಾಲೇಜಿನಲ್ಲಿದ್ದಾಗ ಹಾಲಿವುಡ್ ನಟ ಬ್ರಾಡ್ಲೆ ಕೂಪರ್ ಜೊತೆ ನಾಟಕದಲ್ಲಿ ಭಾಗವಹಿಸಿದ್ದಳಂತೆ. ಅಂದಿನಿಂದ ಆ ನಟನ ರಟ್ಟಿನ ಕಟೌಟ್‌ನೊಂದಿಗೆ ಜೀವನ ನಡೆಸುತ್ತಿದ್ದಾಳೆ. ಕೂಪರ್ ಇದನ್ನು ಕೇಳಿಯಾದರೂ ಬಡಪಾಯಿ ರಟ್ಟಿಗೆ ಮುಕ್ತಿ ನೀಡಬಾರದೇ!

ಲಂಡನ್ನಿನಲ್ಲಿ ಒಟ್ಟು 800 ಆಲೂಗೆಡ್ಡೆ ಹಾಗೂ ಸೇಬಿನಿಂದ ವಿದ್ಯುತ್ ತಯಾರಿಸಿ ಮೊಬೈಲ್ ಬ್ಯಾಟರಿಗೆ ಚಾರ್ಜ್ ಮಾಡಿದ್ದಾರಂತೆ. ಆಲೂಗೆಡ್ಡೆ ಹಾಗೂ ಸೇಬನ್ನು ಮೊಳೆಗಳು ಮತ್ತು ತಾಮ್ರದ ತಂತಿಯಿಂದ ಜೋಡಿಸಿ ಈ ಜಾದೂ ತೋರಿಸಿದ್ದಾರಂತೆ. ಹಣ್ಣು, ತರಕಾರಿಗಳು ಪ್ಲೇಟಿನಿಂದ ಮುಖದ ಫೇಶಿಯಲ್ ಆಗಿ ಜಿಗಿದು ಬಹಳ ವರ್ಷಗಳಾದವು. ಈಗ ಮೊಬೈಲ್ ಮೈಯನ್ನೂ ಸವರುತ್ತಿವೆ ಎಂದರೆ... ಹೊಟ್ಟೆಗೆ?